ಕರ್ನಾಟಕ ಸರ್ಕಾರ
ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ:Comp/09/2003-04

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ,
8ನೇ ಮಹಡಿ, ಕಂದಾಯಭವನ
ಕೆಂಪೇಗೌಡ ರಸ್ತೆ, ಬೆಂಗಳೂರು -09
ದಿನಾಂಕ: 01 -03-2021

## ಸುತ್ತೋಲೆ -29

**ವಿಷಯ:** ದಸ್ತಾವೇಜುಗಳನ್ನು ನೋಂದಾಯಿಸುವ ಪೂರ್ವದಲ್ಲಿ "Document Summary Report" ನ್ನು ಪರಿಶೀಲಿಸಿ ಸಹಿ ಮಾಡಿದ ನಂತರ ದಸ್ತಾವೇಜನ್ನು ನೋಂದಾಯಿಸುವ ಕುರಿತು.

**ಉಲ್ಲೇಖ:** 1. ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ: Comp/09/2003-04, ದಿನಾಂಕ: 31-01-2007. (ಸುತ್ತೋಲೆ ಸಂಖ್ಯೆ: 14)

2. ಈ ಕಛೇರಿಯ ಸುತ್ತೋಲೆ ಪತ್ರ ಸಂಖ್ಯೆ: Comp/09/2003-04, ದಿನಾಂಕ: 27-11-2010. (ಸುತ್ತೋಲೆ ಸಂಖ್ಯೆ: 18)

******

ಪ್ರಸ್ತಾವಿತ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಸಾರ್ವಜನಿಕರ ದಸ್ತಾವೇಜುಗಳನ್ನು ನೋಂದಾಯಿಸುವ ಪೂರ್ವದಲ್ಲಿ ಕಾವೇರಿ ಗಣಕಯಂತ್ರಗಳಲ್ಲಿ ಕೀ-ಇನ್ (Key-in) ಮಾಡಲಾದ ನಮೂದುಗಳು ಸರಿ ಇರುವ ಬಗ್ಗೆ "Document Summary Report" ನ ಮುಖಾಂತರ ಪರಿಶೀಲಿಸಿ ಸಂಬಂಧಪಟ್ಟ ಉಪನೋಂದಣಾಧಿಕಾರಿ ರವರು, ಡೇಟಾ ಎಂಟ್ರಿ ಆಪರೇಟರ್ ಹಾಗೂ ದಸ್ತಾವೇಜನ್ನು ನೋಂದಣಿಗೆ ಹಾಜರುಪಡಿಸಿದ ಪಕ್ಷಕಾರರು ಸಹಿ ಮಾಡಿದ ನಂತರ, ದಸ್ತಾವೇಜನ್ನು ನೋಂದಾಯಿಸಲು ಸೂಚಿಸಲಾಗಿರುತ್ತದೆ.

ಉಲ್ಲೇಖ(2)ರ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ದಸ್ತಾವೇಜು / ವಿವಾಹ / ಫರ್ಮ್‌ಗಳನ್ನು ನೋಂದಾಯಿಸುವ ಸಂದರ್ಭದಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳು ಎಸಗುವ ಡೇಟಾ ಎಂಟ್ರಿ ಹಾಗೂ ಸ್ಕ್ಯಾನಿಂಗ್ ತಪ್ಪುಗಳಿಗೆ ಜುಲ್ಮಾನೆ (Fine) ವಿಧಿಸುವಂತೆ ಮತ್ತು ದಸ್ತಾವೇಜನ್ನು ನೋಂದಾಯಿಸುವ ಪೂರ್ವದಲ್ಲಿ "Document Summary Report" ಗಳನ್ನು ಸರಿಯಾಗಿ ಪರೀಶೀಲಿಸದೆ ಇರುವ ಇಲಾಖೆಯ ಅಧಿಕಾರಿ / ಸಿಬ್ಬಂದಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ -1957 ರನ್ವಯ ಶಿಸ್ತು ಕ್ರಮ ಜರುಗಿಸಲು ಕೇಂದ್ರ ಕಛೇರಿಯ ಗಣಕೀಕರಣ ಶಾಖೆಗೆ ವರದಿ ಸಲ್ಲಿಸುವಂತೆ ತಿಳಿಸಲಾಗಿರುತ್ತದೆ.

ಆದಾಗಿಯೂ ಸಹ ಉಲ್ಲೇಖ(1) ಮತ್ತು (2)ರ ಸುತ್ತೋಲೆಗಳಲ್ಲಿ ನೀಡಿರುವ ನಿರ್ದೇಶನಗಳನ್ನು / ಸೂಚನೆಗಳನ್ನು ಪಾಲಿಸದೆ ದಸ್ತಾವೇಜುಗಳನ್ನು ನೋಂದಾಯಿಸುವ ಸಂದರ್ಭದಲ್ಲಿ ಅನೇಕ ರೀತಿಯ ಡೇಟಾ ಎಂಟ್ರಿ ತಪ್ಪುಗಳು ಸಂಭವಿಸುತ್ತಿರುವುದು ಕಂಡು ಬಂದಿರುತ್ತದೆ. **ಕಛೇರಿಯ ಹಲವಾರು ಸಿಬ್ಬಂದಿ / ಅಧಿಕಾರಿಗಳು**

**"Document Summary Report"** ಪರಿಶೀಲಿಸಿದ ನಂತರವು **Data entry** ತಪ್ಪುಗಳು ಬಂದಿರುವುದನ್ನು **ಯಾವುದೆ ಕಾರಣದಿಂದಲೂ ಸಮರ್ಥಿಸಲು ಸಾಧ್ಯವಿರುವುದಿಲ್ಲ**. ಸದರಿ ತಪ್ಪುಗಳನ್ನು ಸರಿಪಡಿಸಲು ಉಪನೋಂದಣಿ ಕಛೇರಿ / ಜಿಲ್ಲಾನೋಂದಣಿ ಕಛೇರಿ ಮತ್ತು ಕೇಂದ್ರ ಕಛೇರಿಗೆ ಸಾರ್ವಜನಿಕರು ಅಲೆದಾಡುವಂತಾಗಿರುತ್ತದೆ.

ಆದ್ದರಿಂದ ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಸಾರ್ವಜನಿಕರ ದಸ್ತಾವೇಜುಗಳನ್ನು ನೋಂದಾಯಿಸುವ ಪೂರ್ವದಲ್ಲಿ ಕಾವೇರಿ ಗಣಕಯಂತ್ರದಲ್ಲಿ ಕೀ–ಇನ್ (Key-in) ಮಾಡಲಾದ ನಮೂದುಗಳು ಸರಿ ಇರುವ ಬಗ್ಗೆ **"Document Summary Report" ನ ಮುಖಾಂತರ ಕಡ್ಡಾಯ ಪರಿಶೀಲಿಸಿ** ಸದರಿ "Document Summary Report" ಗೆ ಸಂಬಂಧಪಟ್ಟ ಉಪನೋಂದಣಾಧಿಕಾರಿಯವರು, ಕಛೇರಿಯ ಸಿಬ್ಬಂದಿಯು, ಡೇಟಾ ಎಂಟ್ರಿ ಆಪರೇಟರ್‌ಗಳು ಮತ್ತು ದಸ್ತಾವೇಜನ್ನು ನೋಂದಣಿಗೆ ಹಾಜರುಪಡಿಸಿದ ಪಕ್ಷಕಾರರು **ಕಡ್ಡಾಯವಾಗಿ ಸಹಿ ಮಾಡಿದ** ನಂತರ ದಸ್ತಾವೇಜನ್ನು ನೋಂದಾಯಿಸತಕ್ಕದ್ದು. ಇನ್ನು ಮುಂದೆ ಯಾವುದೇ ರೀತಿಯ ಡೇಟಾ ಎಂಟ್ರಿ ತಪ್ಪುಗಳು ಅಥವಾ ಸ್ಕ್ಯಾನಿಂಗ್ ತಪ್ಪುಗಳು ಸಂಭವಿಸಿರುವುದು ಕಂಡುಬಂದಲ್ಲಿ, ಸಂಬಂಧಪಟ್ಟ ಅಧಿಕಾರಿ / ಸಿಬ್ಬಂದಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿ –1957 ರನ್ವಯ ಶಿಸ್ತು ಕ್ರಮಗಳನ್ನು ಜರುಗಿಸಲು ಹಾಗೂ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಡೇಟಾ ಎಂಟ್ರಿ ಆಪರೇಟರ್‌ಗಳನ್ನು ಬದಲಾಯಿಸಲು ಕ್ರಮಕೈಗೊಳ್ಳಲಾಗುವುದು.

01/7/24

**ನೋಂದಣಿ ಮಹಾಪರಿವೀಕ್ಷಕರು ಮತ್ತು**
**ಮುದ್ರಾಂಕಗಳ ಆಯುಕ್ತರು, ಬೆಂಗಳೂರು.**

**ಇವರಿಗೆ,**

ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳು ಮತ್ತು ರಾಜ್ಯದ ಎಲ್ಲಾ ಉಪ ನೋಂದಣಾಧಿಕಾರಿಗಳಿಗೆ ಪಾಲನಾ ಕ್ರಮಕ್ಕಾಗಿ.